ಶ್ರೀ ವಾಟಾಳ್ ನಾಗರಾಜ್.—ಇವತ್ತು ಅವರಿಗೆ ಕೆಲಸ ಹೋಗಿರುವುದರಿಂದ ಅನೇಕ ಜನರು ವಿಷ ತೆಗೆದುಕೊಂಡು ಪ್ರಾಣ ಬಿಡುವ ಪರಿಸ್ಥಿತಿಗೆ ಬಂದಿದ್ದಾರೆ. ಅವರು ಬಹಳ ತೊಂದರೆಪಡುತ್ತಿದ್ದಾರೆ. ಇವತ್ತೂ ಕರೆದುಕೊಂಡು ಬನ್ನಿ ಅಂದರೆ ಆ 6 ಸಾವಿರ ಜನರನ್ನೂ ಕೂಡ ನಾನು ಕರೆದುಕೊಂಡು ಬರುತ್ತೇನೆ.

Mr. SPEAKER.—I have refused my consent.

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ನಿಮ್ಮ ರೂಲಿಂಗ್ ವಿಷಯ ನಾನು ಹೇಳುತ್ತಾ ಇಲ್ಲ ಕಾನೂನಿನಲ್ಲಿ ಏನಿದೆ ಅಂದರೆ ಲೋಕಲ್ ಕ್ಯಾಂಡಿಡೇಟ್ಸ್ 2 ವರ್ಷಗಳವರೆಗೆ ಕೆಲಸಮಾಡಿದ್ದರೆ ಅವರನ್ನು ರೆಗ್ಯುಲರೈಸ್ ಮಾಡಬೇಕಾಗಿದೆ. ಮೂರು ವರ್ಷಗಳವರೆಗೆ ಮಾಡಿದ್ದರೆ ಅವರನ್ನು ಕಡ್ಡಾಯ ಮಾಡಬೇಕೆಂದಿನೆ.

ಅಧ್ಯಕ್ಷರು.—ಆ ವಿಷಯದ ಮೇಲೆ ಮಾತನಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ತಾವು ಹೇಳಿದ ರೂಲಿಂಗನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ತಮ್ಮ ರೂಲಿಂಗ್ ರೀಕನ್ಸಿಡರ್ ಮಾಡಬೇಕು. ಇದು ಸ್ಥಳೀಯ ಅಭ್ಯರ್ಥಿಗಳ ವಿಷಯ. ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಬೆಂಗಳೂರು ಡೈರಿಯಲ್ಲಿ ಕೆಲಸ ಮಾಡತಕ್ಕ ಲೋಕಲ್ ಕ್ಯಾಂಡಿಡೇಟ್ಸನ್ನು ತೆಗೆದಿದ್ದಾರೆಂಬ ವಿಚಾರದ ಮೇಲೂ ಕೊಟ್ಟಿದ್ದೇನೆ. ಅದನ್ನು ರೀ-ಕನ್‌ಸಿಡರ್ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

Mr. SPEAKER.—I have given my ruling. I am sorry, I cannot reconsider it. Next item, calling attention notice by hon. Member Sri M. Nagappa.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ.

Mr. SPEAKER.—The hon. Member can give a notice and I shall consider. I am not permitting him now. There is no scope for such things.

Sri M. S. KRISHNAN.—I would like you to let me know why the adjournment motion has not been allowed ?

Mr. SPEAKER.—I have already given the reasons. There should be some discipline. I am not allowing it. I now call upon hon. Member Sri M. Nagappa.

Calling Attention to a Matter of Urgent Public Importance *re* : Fire Accident in Raichur Town

ಶ್ರೀ ಎಂ. ನಾಗಪ್ಪ (ರಾಯಚೂರು).—ಸ್ವಾಮಿ, ರಾಯಚೂರು ನಗರದಲ್ಲಿ 1969 ನೇ ಇಸವಿ ಮಾರ್ಚ್ 14ನೇ ತಾರೀಖು ರಾತ್ರಿ ಕೋ-ಆಪರೇಟೀವ್ ಪ್ರಿಂಟಿಂಗ್ ಪ್ರೆಸ್ಸಿಗೆ ಬೆಂಕಿ ಬಿದ್ದು ಅನಾಹುತವಾಗಿದೆ. ಆದರಿಂದ ಸಾಧಾರಣವಾಗಿ 70 ಸಾವಿರ ರೂಪಾಯಿಗಳ ನಷ್ಟ ಸಂಭವಿಸಿದೆ. ಆ ಸಂದರ್ಭದಲ್ಲಿ ಫೈರ್ ಬ್ರಿಗೇಡ್‌ನವರು ತಕ್ಷಣ ಆ ಸ್ಥಳಕ್ಕೆ ಬಂದು ಬೆಂಕಿ ಹತ್ತಿಕೊಂಡಿದ್ದನ್ನು ನಂದಿಸುವ ಕೆಲಸವನ್ನು ಕ್ರಮವಾಗಿ ಮಾಡಲಿಲ್ಲ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

Sri MANIK RAO PATIL (Deputy Minister for Home).—Sir, it is reported that on the night of 14th March 1969 a fire broke out in the premises of the Raichur District Co-operative Printing Press. The fire call message was received at the Raichur Fire Station at 21·30 hrs. and

within a minute's time, the Fire Force personnel rushed to the spot with two fire units. By then, the fire had spread to the roof of the building and the paper bundles stocked inside had cought fire. The tanker unit which was pressed into service had to make three trips to the water source situated at a distance of two furlongs from the place of the fire accident. The burning paper bundles were pulled out in stages with utmost care and caution, and it took nearly two hours and forty three minutes for the Fire Force personnel to extinguish the fire completely. It is reported that about 5 to 6 bales of paper, 4 to 5 tables, 3 wooden benches, roofing of the building and one pigeon hole rack were damaged in the fire. The total loss is estimated to be less than Rs. 10,000.

Due to the prompt action taken, the Fire Force personnel were able to save all important records of the Press and also the machineries and prevent damage to the neighbouring thatched buildings and other properties.

ಶ್ರೀ ಎಂ. ನಾಗಪ್ಪ.—ಮಾನ್ಯ ಉಪಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ, "within a minute's time the fire force personnel rushed to the spot with two fire units" ಎಂದು ಹೇಳಿದ್ದಾರೆ. ಫೈರ್ ಸ್ಟೇಷನ್ನಿಗೂ ಮತ್ತು ಕೋ ಆಪರೇಟಿವ್ ಪ್ರಿಂಟಿಂಗ್ ಪ್ರೆಸ್ಸಿಗೂ ಒಂದು ಮೈಲಿ ದೂರ ಇದೆ. ಒಂದು ನಿಮಿಷದಲ್ಲಿ ಒಂದು ಮೈಲಿ ದೂರ ಹೇಗೆ ಫೈರ್ ಬ್ರಿಗೇಡ್‌ನವರು ಬಂದರು ?

Sri MANIK RAO PATIL.—I don't think there is any difficulty to reach the spot within a minute's time. As just now the hon. Member stated that the distance between the place at which accident took place and the fire station is only one mile. If the fire Force Unit proceed at the rate of 60 miles per hour, there is no difficulty for them to reach the spot within a minute's time.

Collection of Land Revenue in Some Taluks

2-30 P.M.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸ್ವಾಮಿ, ಒಂದು ಪ್ರಾಮುಖ್ಯವಾದ ವಿಚಾರವನ್ನು ಈ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಭೂಕಂದಾಯದ ವಿಚಾರದ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡುವ ಕಾಲದಲ್ಲಿ ಸರ್ಕಾರದವರು ಒಂದು ಆಶ್ವಾಸನೆಯನ್ನು ಕೊಟ್ಟರು. ಇದಕ್ಕೆ ಸಂಬಂಧ ಪಟ್ಟಹಾಗೆ ಒಂದು ತಿದ್ದುಪಡಿಯ ಮಸೂದೆಯನ್ನು ತರುವವರೆಗೆ ದೇಶತ ಎರ್ಪ್ಪಾಡಿಗಳಲ್ಲಿಯೂ ಕೂಡ ಬರಾತ್ಕಾರವಾಗಿ ಮತ್ತು ಕಡ್ಡಾಯವಾಗಿ ಕಂದಾಯ ವಸೂಲು ಮಾಡಬಾರದು ಎಂದು ಸಂಬಂಧಪಟ್ಟ ಅಧಿಕಾರಿಗಳು ಎಲ್ಲರಿಗೂ ಆಜ್ಞೆಯನ್ನು ಮಾಡುತ್ತೇವೆಂದು ಈ ಸಭೆಗೆ ಭರವಸೆಯನ್ನು ಸರ್ಕಾರದವರು ಕೊಟ್ಟರು. ಇತ್ತೀಚೆಗೆ ಅನೇಕ ಸದಸ್ಯರುಗಳು ತಮ್ಮ ತಮ್ಮ ಕ್ಷೇತ್ರಗಳಿಗೆ ಹೋಗಿ ಬಂದಿದ್ದಾರೆ. ಅಲ್ಲಿ ಸ್ಥಳೀಯ ಅಧಿಕಾರಿಗಳು ಈ ಬಗ್ಗೆ ಸರ್ಕಾರದವರು ಲಿಖಿತ ಮೂಲಕ ಆಜ್ಞೆಯನ್ನು ಕಳುಹಿಸಲಿಲ್ಲವೆಂದು ಹೇಳಿದರು. ಆ ಕಾರಣದಿಂದ ಬರಾತ್ಕಾರವಾಗಿ ರೈತರಿಗೆ ತೊಂದರೆ ಕೊಟ್ಟು ಕಂದಾಯ ವಸೂಲು ಮಾಡಿದ ಅನೇಕ ವರದಿಗಳು ಬಂದಿವೆ. ಸರ್ಕಾರ ಈ ರೀತಿ ಮಾಡಿದರೆ, ಶಾಸನಸಭೆಗೆ ಕೊಟ್ಟಂತಹ ಭರವಸೆಗೆ ಮರ್ಯಾದೆ ಏನು ಬಂತು ? ಸರ್ಕಾರ ತನ್ನ ಭರವಸೆಯನ್ನು ಈಡೇರಿಸುವ ಕಾಲದಲ್ಲಿ ವಿಳಂಬವಾಗಿ ವರ್ತಿಸಿದ್ದರಿಂದ ಸ್ಥಳೀಯ ಅಧಿಕಾರಿಗಳು ಕಂದಾಯ ವಸೂಲು ಮಾಡುವ ಆಜ್ಞೆಯನ್ನು ಜಾರಿಗೆ ತಂದಿದ್ದಾರೆ. ಸರ್ಕಾರದ ಕಾರ್ಯಕ್ರಮ ಚರ್ಚೋ ಇಲ್ಲ. ಇದಕ್ಕೆ ಕಾರಣ ಏನು ಎಂದು ತಿಳಿಯಬಯಸುತ್ತೇನೆ.